ಸಂತೋಷ... ಆಶ್ಚರ್ಯ... ಇಲ್ಲ ನಂಬಲಾಗುತ್ತಿಲ್ಲ. ಈ ಮನೆಗೆ ಬರುವ ಮೊದಲು ದಾರಿಯಲ್ಲಿ ಚೆಲುವೆಯೊಬ್ಬಳನ್ನು ಕಂಡಿದ್ದ. ಬಹುಪಾಲು ಅರುಂಧತಿಯ ಹೋಲಿಕೆ ಇದ್ದ ಹೆಣ್ಣು! ಅವಳೇ... ಅವಳೇ ಇರಬೇಕು.

ರುದ್ರನಾಗ 'ಮಲ್ಲಿಗೆ ಎಂಬ ಹೆಸರಿನಿಂದ ನಿನ್ನ ಮಗಳನ್ನು ಬೆಳೆಸುತ್ತಿದ್ದೇನೆ. ಮಾಂತ್ರಿಕ ವಿದ್ಯೆಯನ್ನು ಕಲಿಸಿ ಅವಳನ್ನು ಸಂಸಾರದ ಮೇಲೆ ಬ್ರಹ್ಮಾಸ್ತ್ರದಂತೆ ಉಪಯೋಗಿಸಲು ಕಾಯುತ್ತಿದ್ದೆ. ಇನ್ನು ತಡಮಾಡಲಾರೆ. ಇವತ್ತು ರಾತ್ರಿಯಿಂದಲೇ ಯುದ್ಧ ಪ್ರಾರಂಭವಾಗುತ್ತದೆ. ನನ್ನ ಸೇಡು ತೀರುತ್ತದೆ.'

ಮಗಳು ಬದುಕಿದ್ದಾಳೆ ಎಂಬ ಆನಂದವನ್ನು ಅನುಭವಿಸುವ ಮೊದಲೇ ಆಘಾತವಾಗಿತ್ತು! ತತ್ತರಿಸಿ ಹೋಗುತ್ತಾನೆ ಮನೋಹರ.

ರುದ್ರನಾಗ 'ಹೋಗು ಇಲ್ಲಿಂದ ಬೇಗ ಹೋಗು... ಸಾಧ್ಯವಾದರೆ ಬದುಕಲು ಪ್ರಯತ್ನಿಸು. ಆದರೆ ನಿನ್ನ ಮಗಳು ದೊಡ್ಡ ಮಾಂತ್ರಿಕ ಹೆಣ್ಣು. ಅವಳ ಪ್ರಯೋಗಕ್ಕೆ ಹುಸಿ ಎಂಬುದು ಇಲ್ಲ...'

ಮನೋಹರನ ಕಾಲುಗಳು ನಡುಗುತ್ತಿವೆ. ದೇಹದಲ್ಲಿ ಬೆವರು ಜಿನುಗುತ್ತಿದೆ!

ರುದ್ರನಾಗ ನಗುತ್ತಿದ್ದಾನೆ! ಮಾನವ ಆಕೃತಿಯ ನೆರಳೊಂದು ಚಲಿಸಿದ್ದನ್ನು ಅವರಿಬ್ಬರೂ ಸಹ ಗಮನಿಸಲಿಲ್ಲ.

* * *

ಮನೆಗೆ ಬಂದ ಕೂಡಲೇ ಕಾವ್ಯ ತನ್ನ ತಾಯಿಯ ರೂಮಿಗೆ ಬಂದಳು.

ಗಾಬರಿಯಿಂದ ಚಡಪಡಿಸುತ್ತಿದ್ದ ಅರುಂಧತಿ 'ಎಲ್ಲಿಗೆ ಹೋಗಿದ್ದೆ ಕಾವ್ಯ. ನಾನು ಎಷ್ಟೊಂದು ಗಾಬರಿಯಾಗಿದ್ದೆ ಗೊತ್ತೆ. ನಿನ್ನ ಡ್ಯಾಡಿ ಸಹ ಊರಿನಲ್ಲಿ ಇಲ್ಲ. ಎಲ್ಲಿಗೆ ಹೋಗಿದ್ದೆ?'

ಕಾವ್ಯ ನಗುತ್ತಲೇ 'ಅದನ್ನು ನಂತರ ಹೇಳುತ್ತೇನೆ. ಈಗ ನಿನಗೆ ಸಂತೋಷ, ಆಶ್ಚರ್ಯ ಉಂಟಾಗುವಂತಹ ವ್ಯಕ್ತಿಯನ್ನು ಕರೆತಂದಿದ್ದೇನೆ.'

'ಯಾರೇ ಅದು?'

'ಮದಂತ'

ಹುಬ್ಬೇರಿಸಿದಳು ಅರುಂಧತಿ.

'ರುದ್ರಮಾವನ ಶಿಷ್ಯರಂತೆ...'

ಕಾವ್ಯ ಕೈ ತೋರಿಸಿದಳು. ಮುಂದಿನ ಮತ್ತೊಂದು ಕ್ಷಣದಲ್ಲಿ ಅರುಂಧತಿ ಹೊರಗೆ ಬಂದಿದ್ದಳು. ಮದಂತ ಕೈ ಜೋಡಿಸಿದ... ಅರುಂಧತಿ ಅವನನ್ನು ತವರು ಮನೆಯಲ್ಲಿದ್ದಾಗ ತುಂಬಾ ಸಲ ನೋಡಿದ್ದಳು. ಆದರೆ ಮಾತನಾಡಿಸಿರಲಿಲ್ಲ. ಏಕೆಂದರೆ ರುದ್ರನಾಗ ಅದನ್ನು ಸಹಿಸುತ್ತಿರಲಿಲ್ಲ.

ಮೊಬೈಲ್ ಸಿಗ್ನಲ್ ನೀಡಿತು. ಕಾವ್ಯ ಅದನ್ನು ಬೇಗ ತೆಗೆದು ಆಪರೇಟ್ ಮಾಡಿದಳು. ಪ್ರಿಯತಮನ ಧ್ವನಿ! ಕೆಂಪೇರಿತು ಅವಳ ಮುಖ. ಅವಳು 'ನೀವಿಬ್ಬರು ಮಾತಾಡುತ್ತಿರಿ' ಎಂದು ತನ್ನ ರೂಮಿಗೆ ಬಂದು ಬಾಗಿಲು ಹಾಕಿಕೊಂಡಳು. ಅರುಂಧತಿ ಮತ್ತು ಮದಂತ ಮಾತಾಡುತ್ತಿರುವಾಗ ಅರುಂಧತಿ ಅಳುತ್ತಾಳೆ. ಅವಳ ಮುಖದಲ್ಲಿ ಭಯ... ಗಾಬರಿ... ಆತಂಕ ಕಂಡುಬರುತ್ತಿದೆ. ಅದರೊಂದಿಗೆ ತುಸು ಸಂತೋಷ! ಮದಂತ ಎಲ್ಲಾ ಹೇಳುತ್ತಿದ್ದಾನೆ ಬೆಡ್‌ರೂಮಿನಲ್ಲಿ...

'ಮಿಸೆಸ್ ಸುರೇಂದ್ರ'

ಅವಳ ಮುಖ ಕೆಂಪೇರಿತು. ಸುರೇಂದ್ರ 'ನಿನ್ನೆಯಿಂದ ನೀನು ಮನೋಹರ್ ಅವರ ಮಗಳಲ್ಲ. ನನ್ನ ಹೆಂಡತಿ!'

ಸುರೇಂದ್ರ ಹೇಳುತ್ತಿರುವುದು ನಿಜ. ಅವಳನ್ನು ಭಯ, ಅನುಮಾನ ಕಾಡಿದ್ದರಿಂದ ಸುರೇಂದ್ರನನ್ನು ಗುಟ್ಟಾಗಿ ರಿಜಿಸ್ಟರ್ಡ್ ಮ್ಯಾರೇಜ್ ಮಾಡಿಕೊಂಡಿದ್ದಳು. ಸುರೇಂದ್ರನೇ ಈ ಸಲಹೆ ನೀಡಿ ಆತುರಾತುರವಾಗಿ ಮದುವೆ ಮಾಡಿಕೊಂಡಿದ್ದ. ಸುರೇಂದ್ರನನ್ನು ಇವಳು ತುಂಬಾ ಪ್ರೀತಿಸುತ್ತಿದ್ದಳು. ಅವನನ್ನು ಬಿಟ್ಟು ಇರಲಾರೆ ಎಂಬ ಭಾವನೆಗಳ ಒತ್ತಡ ಜಾಸ್ತಿಯಾಗಿತ್ತು. ಅವಳ ತಂದೆತಾಯಿ ಮುಂದಿನ ವರ್ಷ ಮದುವೆ ಮಾಡಬೇಕು ಎಂದುಕೊಂಡಿದ್ದರು.

ಸುರೇಂದ್ರ ಎಂಜಿನಿಯರಿಂಗ್ ಓದುತ್ತಿದ್ದ. ಇನ್ನೂ ಸಹ ಒಂದು ಸೆಮಿಸ್ಟರ್ ಬಾಕಿಯಿತ್ತು. ಸುರೇಂದ್ರ ಈ ಸಲಹೆ ನೀಡಿದ ಕೂಡಲೇ ಒಪ್ಪಿಕೊಂಡಿದ್ದಳು. ಏಕೆಂದರೆ ಅವನನ್ನು ಸೇರುವ ಆಸೆ, ಆತುರ ಅವಳಿಗೂ ಇತ್ತು. ರಹಸ್ಯವಾಗಿ ಮದುವೆ ಮುಗಿದಿತ್ತು. ಸುರೇಂದ್ರ 'ಕಾವ್ಯ... ನೀನು ನನ್ನ ಹೆಂಡತಿ. ನಿನ್ನ ದೇಹದ ಮೇಲೆ ನನಗೆ ಅಧಿಕಾರ ಇದೆ...'

ಅವಳು ನಗುತ್ತಾ 'ಇಲ್ಲಾ ಅಂತ ನಾನು ಹೇಳುತ್ತಿಲ್ಲ ಸುರೇಂದ್ರ...'

'ನಿನ್ನ ತುಟಿಗಳನ್ನು ಮುದ್ದಾಡಬೇಕು'. ಕಿಲಕಿಲನೆ ನಕ್ಕಳು.

'ನನ್ನಿಂದ ತಡೆಯಲಾಗುತ್ತಿಲ್ಲ...'

'ಫೋನಿನಲ್ಲೇ ಎಲ್ಲಾ ಮುಗಿಸಬೇಡ..'

'ಕಾವ್ಯ ಪ್ಲೀಸ್...'

ಕಾವ್ಯ 'ಒಂದೆರಡು ದಿನಗಳು ತಾಳ್ಮೆಯಿಂದ ಇರು. ನಂತರ ನನ್ನ ತಂದೆತಾಯಿಗೆ ಈ ಸಂಗತಿ ಹೇಳುತ್ತೇನೆ. ಆಮೇಲೆ...'

ಸುರೇಂದ್ರ 'ನಿನ್ನ ತಂದೆಗೆ ನೀನು ಯಾವಾಗ ಬೇಕಾದರೂ ತಿಳಿಸು. ಆದರೆ ಒಂದೇ ಒಂದು ಸಲ ನಿನ್ನನ್ನು ನಾನು...'

'ತುಂಬಾ ಆಸೆಯಾಗುತ್ತಿದೆಯೇ?'

'ನಿನಗೆ ಆಸೆ ಇಲ್ಲವೆ...'

ನಾಚಿಕೆಯಿಂದ 'ಇದೆ...'

'ಹಾಗಾದರೆ ಬಂದು ಬಿಡು...'

ಗಾಬರಿಯಿಂದ 'ಎಲ್ಲಿಗೆ?'

'ಮೊದಲ ಮಿಲನಕ್ಕೆ...'

'ಹಾಗಲ್ಲ ಸುರೇಂದ್ರ...'

ಸುರೇಂದ್ರ 'ನಿನಗಾಗಿ ಕಾಯುತ್ತಿರುತ್ತೇನೆ. ನೀನು ನಿನ್ನ ಮನೆಯಲ್ಲಿ ಏನಾದರೂ ಸುಳ್ಳು ಹೇಳಿ ಬರಬೇಕು. ನೋಡು ನೀನು ಒಂದು ದಿನ ಪೂರ್ತಿ ನನ್ನ ಜೊತೆ ಇರಬೇಕು... ಹಗಲುರಾತ್ರಿ ನಿನ್ನನ್ನು ಹಿಂಡಿ ಸುಖ ಪಡಬೇಕು ನಾನು...'

ಅವನು ಈ ರೀತಿ ಮಾತಾಡುತ್ತಿದ್ದರೆ ಇವಳಲ್ಲಿ ಬಯಕೆಗಳು ಉಕ್ಕೇರುತ್ತಿವೆ.

'ಬರುತ್ತೀಯ ತಾನೆ?'

'ಎಲ್ಲಿಗೆ ಹೋಗೋಣ?'

ಸುರೇಂದ್ರ 'ನೀನು ಕಾರು ತೆಗೆದುಕೊಂಡು ನಮ್ಮ ಮಾಮೂಲಿ ಜಾಗಕ್ಕೆ ಬಾ. ಅಲ್ಲಿ ತೀರ್ಮಾನಿಸೋಣ...'

'ಆಯ್ತು ಬರುತ್ತೇನೆ.'

'ಹತ್ತು ನಿಮಿಷಗಳಲ್ಲಿ...'

'ಅಬ್ಬ... ಆತುರ ನೋಡು.'

ಸುರೇಂದ್ರ ಪೋಲಿ ಪೋಲಿಯಾಗಿ ನಗುತ್ತಾ 'ನೀನು ನನ್ನ ಕೈಗೆ ಈ ಸಲ ಸಿಗು. ಸಾಕು... ಸಾಕು ಎನ್ನುವಂತೆ ಸುಖ ಕೊಡುತ್ತೇನೆ.' ರಕ್ತವೆಲ್ಲಾ ಮುಖಕ್ಕೆ ನುಗ್ಗಿದಂತೆ ಕೆಂಪುಕೆಂಪಾಗಿ ಹೋದಳು ಕಾವ್ಯ!

ಫೋನ್ ಡಿಸ್‌ಕನೆಕ್ಟ್ ಆಗಿತ್ತು. ಕಾವ್ಯ ರೆಡಿಯಾಗಿ ಹೊರಗೆ ಬಂದಾಗ ಈ ಹಾಲ್‌ನಲ್ಲಿ ಅರುಂಧತಿ ಇರಲಿಲ್ಲ. ಅವಳು ಮುಖ ತೊಳೆದುಕೊಳ್ಳಲು ಬಾತ್‌ರೂಮಿಗೆ ಹೋಗಿದ್ದಳು. ಅವಳು ತುಂಬಾ ಅತ್ತಿದ್ದಳಲ್ಲ. ಮದಂತ ಕಾಫಿ ಕುಡಿಯುತ್ತಾ ಸೋಫಾದಲ್ಲಿ ಕುಳಿತಿದ್ದ.

ಕಾವ್ಯ ತನ್ನ ತಾಯಿ ಇಲ್ಲದ್ದನ್ನು ಕಂಡು ಅಬ್ಬ ಎಂದುಕೊಂಡಳು. ಈಗ ತಾನೇ ಸುತ್ತಾಡಿ ಬಂದಿರುವುದರಿಂದ ಮನೆಯ ಹೊರಗೆ ಹೋಗಲು ತಾಯಿ ಅನುಮತಿ ಕೊಡಲಾರಳು. ಸುರೇಂದ್ರನನ್ನು ಸೇರುವ, ಹೊಸ ಸುಖ ಪಡೆಯುವ ಆತುರ ಜಾಸ್ತಿಯಾಗುತ್ತಿದೆ. ಅಲ್ಲಿಂದ ಬಂದ ಮೇಲೆ ತಾಯಿಗೆ ಏನಾದರೂ ಹೇಳಿದರಾಯಿತು ಎಂದುಕೊಂಡು ಹೊರಟಳು.

ಮದಂತ ಅವಳನ್ನು ನೋಡಿದ. ಅವಳು ಕಿರುನಗೆ ಬೀರಿದಳು. ಕಾವ್ಯ ಹೊರಟು ಹೋದಳು.

ಕಾವ್ಯ ತಪ್ಪು ಮಾಡಿದ್ದಳು. ರುದ್ರನಾಗ ತಮ್ಮ ಸಂಸಾರವನ್ನೇ ಮತ್ತೊಬ್ಬಳು ಮಗಳಿಂದ ಸರ್ವನಾಶ ಮಾಡಲು ಪ್ರಯತ್ನಿಸಿರುವ ಸಂಗತಿಯನ್ನು ಕಾವ್ಯಳಿಗೆ ಹೇಳಬೇಕು ಎಂದು ಅರುಂಧತಿ ಅಂದುಕೊಂಡಿದ್ದಳು.

ಕಾವ್ಯ ಅಲ್ಲಿರಲಿಲ್ಲ!

ಅವಳು ತನ್ನ ಪ್ರಿಯತಮ ಹಾಗೂ ಈಗ ಬಾಳಸಂಗಾತಿಯಾಗಿರುವ ಸುರೇಂದ್ರನ ಜೊತೆ ಹೋಗಿದ್ದು ತಪ್ಪಲ್ಲ. ಆದರೆ ತಾಯಿಗೆ ಹೇಳಬೇಕಿತ್ತು. ಆಗ ಅವಳಿಗೆ ಸತ್ಯ ತಿಳಿಯುತ್ತಿತ್ತು. ಅವಳು ಅಪಾಯದಿಂದ ಪಾರಾಗಬಹುದಿತ್ತೇನೋ ಏನೋ? ಈಗ ಕಾವ್ಯ ಅಪಾಯ ಸ್ವಾಗತಿಸಿದ್ದಳು. ತನ್ನ ಜೊತೆ ಸುರೇಂದ್ರನನ್ನು ಕರೆದುಕೊಂಡು ಹೊರಟಿದ್ದಳು.

* * *

ಮನೋಹರ ಹೊರಟುಹೋದ ಕೂಡಲೇ ರುದ್ರನಾಗ ಎದ್ದು ಬಂದ. ಮನೋಹರ ನಿಂತಿದ್ದ ಜಾಗದಿಂದ ಒಂದು ಹಿಡಿ ಮಣ್ಣನ್ನು ತೆಗೆದ. ಅದೇ ಸಮಯಕ್ಕೆ ಹೊರಗೆ ಹೋಗಿದ್ದ ಮಲ್ಲಿಗೆ ಅಲ್ಲಿಗೆ ಬಂದಳು.

ರುದ್ರನಾಗ 'ಮಲ್ಲಿಗೆ... ಈ ರಾತ್ರಿ ನೀನು ಚಂಡನನ್ನು ಪ್ರಯೋಗ ಮಾಡಬೇಕು...'

ಚಂಡ ಪಂಚ ಕ್ಷುದ್ರಶಕ್ತಿಗಳಲ್ಲಿ ಒಂದು. ರಕ್ತಪಿಪಾಸು ಈ ಚಂಡ! ದ್ವಿಗುಣ ವೇಗದ ಆತುರಗಾರ! ಇವನಿಗೆ ತಡೆ ಎಂಬುದೇ ಇಲ್ಲ. ಮಲ್ಲಿಗೆ ತನ್ನ ಮಾವನಿಂದ ಹಿಡಿಮಣ್ಣು ಮತ್ತು ಈ ಮೊದಲೇ ಕಾಪಾಡಿ ಜೋಪಾನವಾಗಿ